ಸಿ. ಸಿ. ನಂ.- **309/2021**

ಪಿ.ಡಬ್ಲ್ಯೂ. **1**

ಸಾಕ್ಷಿಯು ದಿನಾಂಕ- **01-04-2024** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲು- ಆರೋಪಿ ಪರ ಶ್ರೀ ಕೆ.ಎಸ್.ಎನ್ ವಕೀಲರಿಂದ -

ಅಮರ್ದೀಪ್ ಕೌರ್ ನನ್ನ ಹೆಂಡತಿಯ ಹೆಸರು. ಸುಕೋ ಬ್ಯಾಂಕ್ ಖಾತೆ ನನ್ನ, ನನ್ನ ಹೆಂಡತಿ ಮತ್ತು ನನ್ನ ತಾಯಿಯ ಹೆಸರಿನಲ್ಲಿ ಜಂಟಿಯಾಗಿದೆ. ಸದರಿ ಖಾತೆಯನ್ನು ಆಪರೇಟ್ ಮಾಡಲು ನನ್ನ ಹೆಂಡತಿ ಮತ್ತು ನನ್ನ ತಾಯಿಯ ಪರವಾನಗಿ ಬೇಕು ಎಂದರೆ ಖಾತೆ ತೆರೆಯುವ ಅರ್ಜಿಯಲ್ಲಿ ಯಾರದರು ಮಾಡಬಹುದು ಎಂದು ಇದೆ. ಸದರಿ ಅರ್ಜಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅದು ಬ್ಯಾಂಕ್ ನಲ್ಲಿ ಇದೆ. ಆರೋಪಿಯು ಪ್ರಾಮಿಸರಿ ನೋಟ್ ಮತ್ತು ರೂ. **100** ಛಾಪ ಕಾಗದವನ್ನು ಹಿಂದಿರುಗಿಸಿ ಚೆಕ್ ನ್ನು ನೀಡಿದ್ದಾರೆಂದು ನನ್ನ ದೂರು ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ. ನನ್ನ ದೂರಿನಲ್ಲಿ ಆರೋಪಿಗೆ ಸಾಲ ನೀಡಿದ್ದೇನೆಂದು ತೋರಿಸಿರುತ್ತೇನೆ.

ನನ್ನ ದೂರಿನ **4** ನೇ ಪ್ಯಾರಾದಲ್ಲಿ ದಿಃ **04-04-2009** ರಂದು ಅಕ್ನಾಲೆಡ್ಜೆಂಟ್ ರೆಸಿಪ್ಟ್ ಕೊಟ್ಟಿದ್ದಾರೆಂದು ಬರೆದಿದ್ದಿರಿ ಸಾಲ ನೀಡಿದ್ದೇನೆಂದು ಬರೆದಿಲ್ಲ ಎಂದರೆ ಅದರ ಅರ್ಥ ಅದೇ ಇರುತ್ತದೆ. ಆರೋಪಿ ಜೊತೆ ನಾನು ಟಯರ್ ವ್ಯವಹಾರ ಮಾಡಿರುತ್ತೇನೆ, ಅದಲ್ಲದೆ ಈ ಹಿಂದೆ ಸಾಲವನ್ನು ನೀಡಿರುತ್ತೇನೆ ಮತ್ತು ಆಸ್ತಿಗೆ ಸಂಬಂಧಿಸಿದಂತೆ ಸೇಲ್ ಅಗ್ರಿಮೆಂಟ್ ನ್ನು ಬರೆದುಕೊಟ್ಟಿರುತ್ತಾರೆ. ನಾನು ಆರೋಪಿ ಜೊತೆ **2008** ರಿಂದ ವ್ಯವಹಾರ ಮಾಡುತ್ತಿದ್ದೇನೆ. ಆರೋಪಿ ನನಗೆ **8** ಪ್ರಾಮಿಸರಿ ನೋಟನ್ನು ನೀಡಿರುತ್ತಾರೆ. ಅಕ್ನಾಲೆಡ್ಜೆಂಟ್ ರೆಸಿಪ್ಟ್ ನಲ್ಲಿ ಪ್ರಾಮಿಸರಿ ನೋಟ್, ಸೇಲ್ ಅಗ್ರಿಮೆಂಟ್ ಮತ್ತು ರೂ. **100** ಛಾಪ ಕಾಗದ ಆರೋಪಿಗೆ ವಾಪಾಸ್ ನೀಡಿದ್ದೇನೆಂದು ನಮೂದು ಮಾಡಿಲ್ಲ ಎಂದರೆ ಸರಿ. ನಾನು ಯಾರಿಗೆ ಯಾವುದೇ ಹಣ ನೀಡಿದಾಗ ಅವರಿಂದ ಸ್ವೀಕೃತಿ ಪಡೆದುಕೊಳ್ಳುತ್ತೇನೆ ಎಂದರೆ ವಿಶ್ವಾಸ ನಂಬಿಕೆ ಮೇಲೆ ಸಹ ಕೊಡುತ್ತೇನೆ. ಆರೋಪಿಯು ರೂ. **12,77,800/-** ಕೊಡುವುದು ಬಾಕಿ ಎಂದು ತೋರಿಸಲು ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಯಾವುದೇ ದಾಖಲಾತಿಗಳನ್ನು ಮರಳಿ ನೀಡಿದರೆ ಅದರ ನಕಲು ಪ್ರತಿ ಇಟ್ಟುಕೊಳ್ಳುತ್ತೇನೆ ಎಂದರೆ ಸರಿಯಲ್ಲ.

ಪಿ.ಡಬ್ಲ್ಯೂ. 1

ನಾನು ಮತ್ತು ಆರೋಪಿ ಹಿಂದೆ ಟ್ರಾನ್ಸ್ ಪೋರ್ಟ್ ಬಿಜಿನೆಸ್ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನಾನು ಎಲ್ಲಿಯವರೆಗೆ ರೂ. 12,77,800/- ಹಣವನ್ನು ಹಂತ-ಹಂತವಾಗಿ ಹೇಗೆ ಮತ್ತು ಎಷ್ಟು ಮೊತ್ತಕ್ಕೆ ನೀಡಿದ್ದೇನೆಂದು ತೋರಿಸುವುದಿಲ್ಲವೋ ಅಲ್ಲಿಯವರೆಗೆ ಪ್ರಸ್ತುತ ಪ್ರಕರಣದಲ್ಲಿ ಪರಿಹಾರ ಪಡೆದುಕೊಳ್ಳಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಮೋಸ ಮಾಡಲು ನಾನು ಪ್ರಶ್ನಿತ ಚೆಕ್ ನ್ನು ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಯ ಮನೆಗೆ ಹೋಗುವುದು, ಬರುವುದು ಮಾಡುವಾಗ ಆರೋಪಿಯು ಟ್ರಾನ್ಸ್ ಪೋರ್ಟ್ ವ್ಯವಹಾರಕ್ಕೆಂದು ಇಟ್ಟಿರುವ ಚೆಕ್ ಗಳನ್ನು ತೆಗೆದುಕೊಂಡು ಅವುಗಳನ್ನು ದುರುಪಯೋಗ ಮಾಡಿ ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿಗೆ ಮೋಸ ಮಾಡುವ ಉದ್ದೇಶದಿಂದ ಆ ಚೆಕ್ ಗಳನ್ನು ಇಟ್ಟುಕೊಂಡು ಅವರ ವಿರುದ್ಧ 13 ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಕಾಕುಬಾಳ್ ಲಕ್ಷ್ಮಣ್ ಶೆಟ್ಟಿ ಎನ್ನುವವರು ಸಿ.ಸಿ ನಂಃ 2234/2018 ನ್ನು ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ನಾನು ಪ್ರಕರಣದಲ್ಲಿ ನೀಡಿರುವ ಹಣವನ್ನು ಸ್ವಂತಕ್ಕೆ ದುರುಪಯೋಗಪಡಿಸಿಕೊಂಡಿದ್ದೇನೆಂದು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಇ.ಪಿ ನಂಃ 87/2015 ರಲ್ಲಿ ಡಿ.ಹೆಚ್.ಆರ್ ಗೆ ನೀಡಿರುವ ಹಣವನ್ನು ಅವರಿಗೆ ನೀಡಿದ ಅದನ್ನು ಸಹ ದುರುಪಯೋಗಪಡಿಸಿಕೊಂಡಿದ್ದೇನೆಂದು ಕಂಪ್ಲೆಂಟ್ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸುಳ್ಳು ಕಂಪ್ಲೆಂಟ್ ಮಾಡಿರುತ್ತಾರೆಂದು ನುಡಿಯುತ್ತಾರೆ. ಇ.ಪಿ 87/2015 ಮತ್ತು ಸಿ.ಸಿ ನಂಃ 2234/2018 ರಲ್ಲಿರುವ ದೂರುದಾರರು ಮತ್ತು ಡಿ.ಹೆಚ್.ಆರ್ ಒಬ್ಬರೆ ಎಂದರೆ ಸಂಸ್ಥೆ ಬೇರೆ-ಬೇರೆ ಆಗಿದ್ದು ಅಧ್ಯಕ್ಷರು ಒಬ್ಬರೆ ಆಗಿರುತ್ತಾರೆ. ನಾನು ಜನರಿಗೆ ಮೋಸ ಮಾಡುವ ಉದ್ದೇಶದಿಂದ ಸಾಕಷ್ಟು ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿಯು ರೂ. 8 ಲಕ್ಷಗಳನ್ನು ಯಾವ ದಿನಾಂಕದಂದು, ಯಾವ ವಿಧದ ಮೂಲಕ ಪಾವತಿಸಿರುತ್ತಾರೆಂದು ತೋರಿಸಲು ದಾಖಲಾತಿ ಸಲ್ಲಿಸಿದ್ದಿರಾ ಎಂದರೆ ಇಲ್ಲ. ಸಾಕ್ಷಿ ಮುಂದುವರೆದ ಎಲ್ಲಾ ದಾಖಲಾತಿಗಳನ್ನು ಆರೋಪಿ ನನ್ನಿಂದ ಪಡೆದುಕೊಂಡು ಹೋಗಿರುತ್ತಾರೆಂದು ನುಡಿಯುತ್ತಾರೆ. ನಾನು ಸೆಲ್ಫ್ ಚೆಕ್ ಗಳ ಮೂಲಕ ಕೆಲವು ಹಣವನ್ನು ಅವರ ಖಾತೆಯಿಂದ ಡ್ರಾ ಮಾಡಿರುತ್ತೇನೆ ಎಂದರೆ ಸರಿ. ಆ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿದ್ದಿರಾ ಎಂದರೆ ಇಲ್ಲ.

ಸಾಮಾನ್ಯವಾಗಿ ಸೆಲ್ಫ್ ಚೆಕ್ ಗಳನ್ನು ಸ್ವಂತಕ್ಕೆ ಉಪಯೋಗಿಸುತ್ತಾರೆ ಬೇರೆಯವರಿಗೆ ಕೊಡುವುದಿಲ್ಲ ಎಂದರೆ ಸರಿಯಲ್ಲ. ರೂ. **12,77,800/-** ಗೆ ಸಂಬಂಧಿಸಿದಂತೆ ಪ್ರಾಮಿಸರಿ ನೋಟ್ ಅಥವಾ ಅಗ್ರಿಮೆಂಟ್ ನ್ನು ಹಾಜರುಪಡಿಸಿದಿಲ್ಲ ಎಂದರೆ ಅಕ್ನಾಲೆಡ್ಜ್ಮೆಂಟ್ ನ್ನು ಹಾಜರುಪಡಿಸಿರುತ್ತೇನೆ.

ದಿಃ **05-02-2013** ರಂದು ಸುಕೋ ಬ್ಯಾಂಕ್ ಖಾತೆಗೆ ರೂ. **48,000/-** ಜಮಾ ಆಗಿರುತ್ತದೆ ಎಂದರೆ ಕ್ಯಾಶ್ ಪೇಮೆಂಟ್ ಆಗಿದೆ. ದಿಃ **12-03-2013** ರಂದು ಸುಕೋ ಬ್ಯಾಂಕ್ ಖಾತೆಗೆ ರೂ. **50,000/-** ಜಮಾ ಆಗಿರುತ್ತದೆ ಎಂದರೆ ಕ್ಯಾಶ್ ಪೇಮೆಂಟ್ ಆಗಿದೆ. ದಿಃ **27-11-2014** ರಂದು ಕಾರ್ಪೋರೇಷನ್ ಬ್ಯಾಂಕ್ ನಿಂದ ರೂ. **2** ಲಕ್ಷ ಜಮಾ ಆಗಿದೆ ಎಂದರೆ ಸರಿ. ದಿಃ **30-12-2015** ರಂದು ರೂ. **26,000/-**, ದಿಃ **19-01-2016** ರಂದು ರೂ. **45,000/-**, ದಿಃ **20-01-2016** ರಂದು ರೂ. **16,200/-**, ದಿಃ **22-01-2016** ರಂದು ರೂ. **20,000/-**, ದಿಃ **08-02-2016** ರಂದು ರೂ. **30,000/-**, ದಿಃ **06-01-2016** ರಂದು ರೂ. **31,000/-**, ದಿಃ **06-01-2017** ರಂದು ರೂ. **1,00,006/-** ನನ್ನ ಖಾತೆಗೆ ಜಮಾ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಸ್ಟೇಟ್ಮೆಂಟ್ ಗಳನ್ನು ಒಪ್ಪಿದ್ದರಿಂದ ಎಲ್ಲಾ ಸ್ಟೇಟ್ಮೆಂಟ್ ಗಳನ್ನು ಒಟ್ಟಾಗಿ ನಿ.ಡಿ **1** ಎಂದು ಗುರುತಿಸಲಾಯಿತು.

ದಿಃ **06-01-2017** ರಂದು ನಾನು ಹೇಳಿದ್ದಕ್ಕೆ ಆರೋಪಿಯು ಜ್ಯೋತಿ ಟಯರ್ ಅಕೌಂಟ್ ಗೆ ಎನ್.ಇ.ಎಫ್.ಟಿ ಮೂಲಕ ರೂ. **1,00,006/-** ಗಳನ್ನು ಜಮಾ ಮಾಡಿರುತ್ತಾರೆ ಎಂದರೆ ನೆನಪಿಲ್ಲ. ದಿಃ **03-03-2017** ರಂದು ನನ್ನ ಹೆಂಡತಿಯ ಖಾತೆಗೆ ಎನ್.ಇ.ಎಫ್.ಟಿ ಮೂಲಕ ರೂ. **1,00,000/-** ಜಮಾ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಅದನ್ನು ಒಪ್ಪಿದ್ದಕ್ಕೆ ಸದರಿ ಸ್ಟೇಟ್ಮೆಂಟ್ ನ್ನು ನಿ.ಡಿ **2** ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸದರಿ ಎಲ್ಲಾ ಹಣದ ವ್ಯವಹಾರ ಟಯರ್ ಬಿಜಿನೆಸ್ ಗೆ ಸಂಬಂಧಿಸಿದ್ದು ಇರುತ್ತದೆ ಪ್ರಸ್ತುತ ವ್ಯವಹಾರಕ್ಕೆ ಸಂಬಂಧಿಸಿದ್ದು ಇರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ದಿಃ **01-10-2016** ರಂದು ಬೇರೆ-ಬೇರೆ ಹಣದ ಮೊತ್ತವನ್ನು ಒಟ್ಟಾರೆ ರೂ. **4,10,000/-** ಸೆಲ್ಫ್ ಚೆಕ್ ಮೂಲಕ ಆರೋಪಿ ಖಾತೆಯಿಂದ ಡ್ರಾ ಮಾಡಿಕೊಂಡಿರುತ್ತೇನೆ ಎಂದರೆ ಆ ಚೆಕ್ ಗಳನ್ನು ನೋಡದೆ ಹೇಳಲಾಗುವುದಿಲ್ಲ. ಸಿ.ಸಿ ನಂಃ **2367/2021** ರಲ್ಲಿ ನಿ.ಡಿ **3** ರಂತೆ ಗುರುತಿಸಲಾಗಿರುವಂತಹ ರಸೀದಿ ಮೂಲಕ ಸಹ ನಾನು ಆ ರಸೀದಿಯಲ್ಲಿ ನಮೂದು ಇರುವ

ಹಣವನ್ನು ನಾನು ಆರೋಪಿಯಿಂದ ಪಡೆದಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಪ್ರಸ್ತುತ ವ್ಯವಹಾರಕ್ಕೆ ಸಂಬಂಧಿಸಿದ್ದು ಇರುವುದಿಲ್ಲ ಎಂದು ನುಡಿಯುತ್ತಾರೆ.

ನಿ.ಪಿ 1 ರಲ್ಲಿರುವ ಸಹಿ ಮತ್ತು ಬರಹಗಳಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದನ್ನು ಆರೋಪಿ ಬರೆದುಕೊಟ್ಟಿರುತ್ತಾರೆ ಎಂದದು ನುಡಿಯುತ್ತಾರೆ. ನಿ.ಪಿ 1 ರಲ್ಲಿರುವ ಬರಹಗಳ ಶಾಹಿ ಮತ್ತು ದಿನಾಂಕ ಶಾಹಿ ಬೇರೆ-ಬೇರೆ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಚೆಕ್ ನ್ನು ಈ ಮೊದಲೇ ಬರೆದಿದ್ದರು ದಿನಾಂಕ ಚೆಕ್ ಕೊಡುವ ದಿನ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಾನು ನೀಡಿರುವ ನೋಟೀಸ್ ಗೆ ಆರೋಪಿ ಉತ್ತರವನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ರಿಪ್ಲೈ ನಲ್ಲಿ ಸಹ ಆರೋಪಿ ಅವರ ಮನೆಯಲ್ಲಿರುವ ಚೆಕ್ ಗಳನ್ನು ಕಳ್ಳತನ ಮಾಡಿರುತ್ತೇನೆಂದು ನಮೂದಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಸುಳ್ಳು ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿಯು ಟ್ರಾನ್ಸ್ ಪೋರ್ಟ್ ಬಿಜಿನೆಸ್ ಮಾಡುವಾಗ ಹಣದ ಅವಶ್ಯಕತೆ ಇದ್ದಾಗ ನನ್ನಿಂದ ಸಾಲ ಪಡೆದು ಅದನ್ನು ಹಿಂದಿರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ತೆಗೆದದುಕೊಂಡಿರುವ ಪ್ರಾಮಿಸರಿ ನೋಟ್, ರೂ. 100 ಬಾಂಡ್, ಟಿ.ಜಿ.ಬಿ ಬ್ಯಾಂಕ್ ಚೆಕ್ ಗಳನು ಭದ್ರತೆಗಾಗಿ ಅವರಿಂದ ಪಡೆದಿರುತ್ತೇನೆ ಎಂದರೆ ಪ್ರಾಮಿಸರಿ ನೋಟ್ ಮತ್ತು ಬಾಂಡ್ ಮಾತ್ರ ನೀಡಿರುತ್ತಾರೆ. ಸದರಿ ವಿಚಾರ ದೂರಿನಲ್ಲಿ ನಮೂದು ಮಾಡಿದ್ದಿರಾ ಎಂದರೆ ಬಾಂಡ್ ಬಗ್ಗೆ ಬರೆದಿರುತ್ತೇನೆ. ಆರೋಪಿಯು ಸುಮಾರು ವರ್ಷಗಳ ಹಿಂದೆ ತೆಗೆದುಕೊಂಡಿದ್ದ ಹಣವನ್ನು ಹಿಂದಿರುಗಿಸಿದ್ದರು ಸಹ ಭದ್ರತೆಗಾಗಿ ತೆಗೆದುಕೊಂಡ ಚೆಕ್ ಗಳನ್ನು ಹೆಚ್ಚಿನ ಹಣ ಪಡೆಯುವ ದುರುದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಿ.ಪಿ 1 ರಲ್ಲಿರುವ ಚೆಕ್ ನ್ನು ಆರೋಪಿಯು ಸಾಲವನ್ನು ಪಡೆದುಕೊಳ್ಳಲು ನೀಡಿರುವುದಿಲ್ಲ ಅದನ್ನು ನಾನು ಆ ರೀತಿಯಲ್ಲಿ ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮೇಲೆ ಓ.ಎಸ್ ನಂಃ 374/2023 ರಲ್ಲಿ ಹಣ ವಸೂಲಾತಿಗಾಗಿ ದಾವೆ ಹೂಡಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಸುಳ್ಳು ಕೇಸ್ ಆಗಿದೆ ಎಂದು ನುಡಿಯುತ್ತಾರೆ. ಅದೇ ರೀತಿ ಪ್ರಸ್ತುತ ನ್ಯಾಯಾಲಯದಲ್ಲಿ ಓ.ಎಸ್ ನಂಃ 375/2023 ರಲ್ಲಿ ಹಣ ವಸೂಲಾತಿಗಾಗಿ ದಾವೆ ಹೂಡಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಸುಳ್ಳು ಕೇಸ್ ಆಗಿದೆ ಎಂದು ನುಡಿಯುತ್ತಾರೆ. ಆರೋಪಿಯು ನನಗೆ

ಯಾವುದೇ ಹಣ ಕೊಡುವುದು ಬಾಕಿ ಇರುವುದಿಲ್ಲ ಆದರೂ ಅವರ ವಿರುದ್ಧ ಈ ಎಲ್ಲಾ ಸುಳ್ಳು ಪ್ರಕರಣಗಳನ್ನು ನಾನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಬಳಿ ಆರೋಪಿ ಸಂದಾಯ ಮಾಡಿರುವ ಹಣದ ಬಗ್ಗೆ ದಾಖಲಾತಿಗಳು ಇದ್ದರು ಸಹ ನಾನು ಅದನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವು ಆರೋಪಿಯ ಬಳಿ ಇರುತ್ತವೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ ದಂ.ಗಳು, ಹೊಸಪೇಟೆ.